KACM010001992016

Presented on : 07-01-2016
Registered on : 07-01-2016
Decided on : --
Duration :

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAVINDRA HEGDE)**

**SPL.C/1/2016**

**Exhibit No.**

Complainant(PROSECUTION):
State by- Karnataka Lokayuktha Police, Chikkamagaluru.
Through Police Station Officer CHIKKAMAGALURU LOKAYUKTA PS
4, Chikkamgaluru
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

-----------------------------------------------------------------------------

APP for State Complainant}: Spl. Public Prosecutor,
Advocate for K.S.SHANTHIPRAKASH appearing for Sri. Channabasappa, So. Ambaraya Makale, aged 50 years, Executive Officer, Taluk Panchayath Office
Advocate appearing for , respectively.

-----------------------------------------------------------------------------

**Offence punishable under : U/Sec.13(1)(E)r/w13(2) of PC Act 1988 of PREVENTION OF CORRUPTION ACT,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C No: 1/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚನ್ನಬಸವ ಟೋಪಣ್ಣ ಉಗ್ರಾಣದ್ | ಪ್ರಾ.ಸಾ.- 39 |
| ತಂದೆಯ ಹೆಸರು | : | ಟೋಪಣ್ಣ | ಚಾ.ಸಾ.- 66 |
| ವಯಸ್ಸು | : | 69 ವರ್ಷ | |
| ಉದ್ಯೋಗ | : | ನಿವೃತ್ತ ಮುಖ್ಯ ವ್ಯವಸ್ಥಾಪಕರು, ವಿಜಯ ಬ್ಯಾಂಕ್ | |
| ವಾಸ ಸ್ಥಳ | : | ಹುಬ್ಬಳ್ಳಿ | |

ದಿನಾಂಕಃ **15-07-2026**

ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ವಿ.ಟಿ.ಟಿ. -ವಿಶೇಷ ಪಿ.ಪಿ. ಯವರಿಂದಃ

1. ನಾನು ಮೇ-2013 ರಿಂದ ಮೇ-2015 ರವರೆಗೆ ನಾನು ವಿಜಯ ಬ್ಯಾಂಕ್ ಸೂಪರ್ ಮಾರ್ಕೆಟ್ ಬ್ರಾಂಚ್, ಗುಲ್ಬರ್ಗದಲ್ಲಿ ಚೀಫ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದೇನೆ.

2. ಆಗಸ್ಟ್-2013 ರಲ್ಲಿ ಲೋಕಾಯುಕ್ತ ಪೊಲೀಸರಿಂದ ಚನ್ನಬಸಪ್ಪ ಮಕಾಲೆರವರ ಬ್ಯಾಂಕ್ ಖಾತೆಯ ಬಗ್ಗೆ ಮಾಹಿತಿ ಕೇಳಿ ಪತ್ರ ಬಂದಿತ್ತು. ಗುಲ್ಬರ್ಗ ವಿಜಯ ಬ್ಯಾಂಕ್ ಶಾಖೆಯಲ್ಲಿ ಚನ್ನಬಸಪ್ಪ ಮಕಾಲೆರವರ ಮನೆ ಸಾಲ ಇತ್ತು. ನಾನು ಅವರ ಸಾಲದ ಖಾತೆಯನ್ನು ಪರಿಶೀಲಿಸಿದ್ದೇನೆ. ಅವರು ದಿನಾಂಕಃ 06-08-2003 ರಂದು ರೂ.3,50,000/- ಗಳನ್ನು ಮನೆ ಸಾಲವಾಗಿ ನಮ್ಮ ಬ್ಯಾಂಕಿನಿಂದ ಪಡೆದಿದ್ದರು. ದಿನಾಂಕಃ 06-08-2012 ರಂದು ಈ ಮನೆ ಸಾಲ ಪೂರ್ತಿ ಚುಕ್ತಾ ಆಗಿರುತ್ತದೆ. ಈ ಮಾಹಿತಿಯನ್ನು ನಾನು ಲೋಕಾಯುಕ್ತ ಪೊಲೀಸರಿಗೆ ದಿನಾಂಕಃ 14-11-2013 ರಂದು ಪತ್ರದ ಮುಖೇನ ಕೊಟ್ಟಿದ್ದೇನೆ. ಪತ್ರದ ಜೊತೆ ಚನ್ನಬಸಪ್ಪ ಮಕಾಲೆರವರ ಮನೆ ಸಾಲದ ಖಾತೆಯ account statement ನ್ನು ದಿನಾಂಕಃ 19-01-2008 ರಿಂದ 06-08-2012 ರವರೆಗಿನ ಅವಧಿಗೆ ಕೊಟ್ಟಿದ್ದೇನೆ. ಅದರ ಹಿಂದಿನ ಅವಧಿಯ account statement ನಮ್ಮ ಕಂಪ್ಯೂಟರ್ ನಲ್ಲಿ ಲಭ್ಯ ಇರುವುದಿಲ್ಲ.

3. ಚನ್ನಬಸಪ್ಪ ಮಕಾಲೆರವರು ನಮ್ಮ ಬ್ಯಾಂಕಿನಿಂದ ಪಡೆದ ಮನೆ ಸಾಲವನ್ನು ಮರು ಪಾವತಿ ಮಾಡಿದ್ದಾರೆ. ಲೋಕಾಯುಕ್ತ ಪೊಲೀಸರಿಗೆ ನಾನು ಕಳುಹಿಸಿದ ಪತ್ರವನ್ನು ಈಗ ನೋಡುತ್ತಿದ್ದು ಅದು ಲೋಕಾಯುಕ್ತ ಚಾರ್ಜ್ ಶೀಟಿನ ಆದಾಯ ಪುಸ್ತಕದ ಪುಟ ಸಂ. 650 ರಲ್ಲಿ ಇದ್ದು, ಅದನ್ನು ನಿ.ಪಿ.117 ಎಂದು, ಸಾಕ್ಷಿಯ ಸಹಿಯನ್ನು ನಿಪಿ.117(ಎ) ಎಂದು

ಗುರುತಿಸಲಾಯಿತು. ಈ ಪತ್ರದ ಜೊತೆ ಲಗತ್ತಿಸಿದ account statement ನಕಲು ಅದು ಲೋಕಾಯುಕ್ತ ಚಾರ್ಜ್ ಶೀಟಿನ ಆದಾಯ ಪುಸ್ತಕದ ಪುಟ ಸಂ.651 ರಲ್ಲಿ ಇದ್ದು, ಅದನ್ನು ನಿ.ಪಿ.118 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ: ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದ:

4. 2003 ರಿಂದ 2008 ರವರೆಗಿನ ಅವಧಿಗೆ ಬ್ಯಾಂಕಿನಲ್ಲಿ ಕೈಯಲ್ಲಿ ಬರೆದ account statement ಲಭ್ಯ ಇರುತ್ತದೆ ಎನ್ನುವುದು ಸರಿಯಲ್ಲ. ಈ ಅವಧಿಗೆ ಸಹಾ ಕಂಪ್ಯೂಟರ್ ನಲ್ಲಿ statement ಇತ್ತು, ಆದರೆ software change ಆಗಿರುವುದರಿಂದ ಆ ಅವಧಿಯ statement ಲಭ್ಯವಿಲ್ಲ. ಈ ಅವಧಿಯ statement ಲಭ್ಯ ಇದ್ದರೂ ಸಹಾ ತನಿಖಾಧಿಕಾರಿಯ ಹೇಳಿಕೆಯ ಮೇರೆಗೆ ಆ ಅವಧಿಯ statement ನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಿ.ಪಿ.118 ಸರಿಯಾದ account statement ಅಲ್ಲ ಎನ್ನುವುದು ಸರಿಯಲ್ಲ.

5. 2005 ಕ್ಕಿಂತ ಹಿಂದೆಯೇ ಚನ್ನಬಸಪ್ಪ ಮಕಾಲೆರವರು ಈ ಮನೆ ಸಾಲದ ಹೆಚ್ಚಿನ ಭಾಗವನ್ನು ಮರುಪಾವತಿ ಮಾಡಿದ್ದರು ಎನ್ನುವುದು ಸರಿಯಲ್ಲ. ನಮ್ಮ ಬ್ಯಾಂಕಿನಲ್ಲಿ ಲಭ್ಯವಿರುವ ಸಂಪೂರ್ಣ ಸಾಲದ ಖಾತೆಯ ಮಾಹಿತಿಯನ್ನು ಉದ್ದೇಶಪೂರಕವಾಗಿ ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/- 15/07/2026
(ರವೀಂದ್ರ ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:

Visit **ecourts.gov.in** for updates or download mobile app "**eCourts Services**" from Android or iOS